ದಿನಾಂಕ:26-05-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಲ್ ಎಸ್ ಬಿ ವಕೀಲರಿಂದಃ

1. ನನ್ನ ಮತ್ತು ಮೃತ ಭೀಮನಾಯಕ ರವರ ನಡುವೆ ನಡೆದ ಕ್ರಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ಮೃತ ಭೀಮನಾಯಕ ರವರು ನೊಂದಾಯಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ಮೃತ ಭೀಮನಾಯಕ ರವರು ಸಹಿಯನ್ನು ಮಾಡಿರುತ್ತಾರೆ. ಸದರಿ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

2. ನಿಪಿ 1 ಕ್ಕೆ ಸಾಕ್ಷಿಗಳಾಗಿ ಮೃತ ಭೀಮನಾಯಕ ರವರ ಮಗ ಮತ್ತು ಸೊಸೆ ಯವರು ಸಹಿ ಮಾಡಿದ್ದು ಸದರಿಯವರ ಸಹಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ 1 ಬಿ ಮತ್ತು ಸಿ ಎಂದು ಗುರುತಿಸಲಾಯಿತು. ನಿಪಿ 1 ನ್ನು ಆನಂದ ಗೋಟಡಕಿ ರವರು ಬರೆದಿದ್ದು, ಸದರಿಯವರ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ 1 ಡಿ ಎಂದು ಎಂದು ಗುರುತಿಸಲಾಯಿತು.

3. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ 5 ಆರ್ ಟಿ ಸಿ ಎಕ್ಸಟ್ರ್ಯಾಕ್ಟಗಳನ್ನು ಹಾಜರು ಮಾಡಿದ್ದು ನಿಪಿ 2 ರಿಂದ 6 ಎಂದು ಗುರುತಿಸಲಾಯಿತು.

4. ಪ್ರತಿವಾದಿಗಳಿಗೆ ನೀಡಿರುವ ನೋಟಿಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿಪಿ 7 ಎಂದು ಗುರುತಿಸಲಾಯಿತು.

5. 2 ಅಂಚೆ ರಶೀದಿಗಳನ್ನು ಹಾಜರು ಮಾಡಿದ್ದು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು.
6. ವಾಪಸ್ಸು ಬಂದಿರುವ 4 ಅಂಚೆ ಲಕೋಟೆಗಳನ್ನು ಹಾಜರು ಮಾಡಿದ್ದು ನಿಪಿ 10 ರಿಂದ 13 ಎಂದು ಗುರುತಿಸಲಾಯಿತು.
7. ಮೃತ ಭೀಮನಾಯಕ ರವರ ಮರಣ ಪ್ರಮಾಣ ಪತ್ರದ ಟ್ರ್ಯೂ ಕಾಪಿಯನ್ನು ಹಾಜರು ಮಾಡಿದ್ದು ನಿಪಿ 14 ಎಂದು ಗುರುತಿಸಲಾಯಿತು.
8. ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಂ ಆರ್ ರಜಿಸ್ಟರ ಎಕ್ಸಟ್ರಾಕ್ಟನ್ನು ಹಾಜರು ಮಾಡಿದ್ದು ನಿಪಿ 15 ಎಂದು ಗುರುತಿಸಲಾಯಿತು.
9. ಓ ಎಸ್ ನಂ.487/2012 ಆದೇಶ ಪುಟದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿಪಿ 16 ಎಂದು ಗುರುತಿಸಲಾಯಿತು. ವಾದ ಪತ್ರದಲ್ಲಿ ಕೇಳಿಕೊಂಡಂತೆ ದಾವಾ ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

<u>ಪಾಟೀ ಸವಾಲುಃ</u>

ಪ್ರತಿವಾದಿಗಳ ಪರ ವಕೀಲರು ಹಾಜರಿದ್ದು, ತಕರಾರನ್ನು ಸಲ್ಲಿಸದ ಕಾರಣ ಪಾಟೀ ಸವಾಲಿಗಾಗಿ ಕೋರಿದ ಸಮಯವನ್ನು ನಿರಾಕರಿಸಿ, ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ